# Google Chat

**Google Ireland Limited (“Google”)**
Gordon House, Barrow Street, Dublin 4, Ireland
https://support.google.com/

*ಡಿಸೆಂಬರ್ 21, 2020 ರಿಂದ ಜಾರಿಗೆ ಬರುತ್ತದೆ*

ಒಪ್ಪಂದದ ಸಾರಾಂಶ

- ಈ ಒಪ್ಪಂದದ ಸಾರಾಂಶವು EU ಕಾನೂನಿನ ಪ್ರಕಾರ ನಮ್ಮ ಸೇವಾ ಕೊಡುಗೆಯ ಮುಖ್ಯ ಅಂಶಗಳನ್ನು ವಿವರಿಸುತ್ತದೆ[1].
- ಸೇವಾ ಕೊಡುಗೆಗಳ ನಡುವೆ ಹೋಲಿಕೆ ಮಾಡಿ ನೋಡುವುದಕ್ಕೆ ನಿಮಗೆ ಸಹಾಯ ಮಾಡುವುದು ಇದರ ಉದ್ದೇಶವಾಗಿದೆ.
- ನಮ್ಮ ಸೇವಾ ಕೊಡುಗೆಯ ಕುರಿತಾದ ಸಂಪೂರ್ಣ ಮಾಹಿತಿ ಇತರ ಡಾಕ್ಯುಮೆಂಟ್‌ಗಳಲ್ಲಿ ಲಭ್ಯವಿದೆ.

ಸೇವೆಗಳು
Google Chat ಎನ್ನುವುದು ವೆಬ್ ಇಂಟರ್‌ಫೇಸ್ ಅಥವಾ ಆ್ಯಪ್ ಮೂಲಕ ಸಾಧನಗಳು ಮತ್ತು ಪ್ಲ್ಯಾಟ್‌ಫಾರ್ಮ್‌ಗಳಾದ್ಯಂತ ನೀಡಲಾಗುವ ತ್ವರಿತ ಸಂದೇಶ ಕಳುಹಿಸುವ ಸೇವೆಯಾಗಿದೆ. Google Chat ಮೂಲಕ ಸಂದೇಶಗಳನ್ನು ಕಳುಹಿಸಲು ಮತ್ತು ಸ್ವೀಕರಿಸಲು ಇಂಟರ್ನೆಟ್ ಕನೆಕ್ಷನ್‌ನ ಅಗತ್ಯವಿದೆ. ಸಮಂಜಸವಾದ ಕೌಶಲ್ಯ ಮತ್ತು ಕಾಳಜಿಯನ್ನು ಬಳಸಿಕೊಂಡು Google Chat ಅನ್ನು Google ಒದಗಿಸುತ್ತದೆ, ಆದರೂ ಸೇವೆಯ ಗುಣಮಟ್ಟದ ಕನಿಷ್ಠ ಹಂತಗಳನ್ನು ನೀಡಲಾಗುವುದಿಲ್ಲ.

ಬೆಲೆ
Google Chat ಅನ್ನು ಯಾವುದೇ ವೆಚ್ಚವಿಲ್ಲದೆ ಒದಗಿಸಲಾಗುತ್ತದೆ ಮತ್ತು ಇದರ ಬಳಕೆಯು Google ಸೇವಾ ನಿಯಮಗಳಿಗೆ ಒಳಪಡುತ್ತದೆ (https://policies.google.com/terms ನಲ್ಲಿ ಲಭ್ಯವಿದೆ).

ಅವಧಿ, ನವೀಕರಣ ಮತ್ತು ಕೊನೆಗೊಳಿಸುವಿಕೆ
ಸೈನ್ ಅಪ್ ಮಾಡಿದ ತಕ್ಷಣವೇ ನೀವು Google Chat ಅನ್ನು ಬಳಸಬಹುದಾಗಿದೆ. Google Chat ಅನ್ನು ನಿಗದಿತ ಅವಧಿಗೆ ಬಳಸಲು ನೀವು ಬದ್ಧರಾಗಿಲ್ಲ ಮತ್ತು ಯಾವಾಗ ಬೇಕಾದರೂ ಅದರ ಬಳಕೆಯನ್ನು ನಿಲ್ಲಿಸಲು ಮುಕ್ತರಾಗಿದ್ದೀರಿ.

ಅಂಗವೈಕಲ್ಯ ಹೊಂದಿರುವ ಅಂತಿಮ ಬಳಕೆದಾರರಿಗಾಗಿ ಇರುವ ವೈಶಿಷ್ಟ್ಯಗಳು
ಕೆಲಸವನ್ನು ಸ್ವಯಂಚಾಲಿತಗೊಳಿಸುವುದಕ್ಕೆ ಸಹಾಯ ಮಾಡಲು ನೀವು Google Chat ನ ಭಾಗವಾಗಿ ಬಾಟ್‌ಗಳನ್ನು ಬಳಸಬಹುದು ಮತ್ತು ಸ್ಕ್ರೀನ್ ರೀಡರ್ ಮತ್ತು ಕೀಬೋರ್ಡ್ ಶಾರ್ಟ್‌ಕಟ್‌ಗಳನ್ನು ಸಹ ಬಳಸಬಹುದು. ಹೆಚ್ಚಿನ ವಿವರಗಳು https://www.google.com/accessibility/ ನಲ್ಲಿ ಲಭ್ಯವಿವೆ.

ಇತರ ಸಂಬಂಧಿತ ಮಾಹಿತಿ
ಗ್ರಾಹಕ ಬೆಂಬಲ: Google Chat ಗೆ ಸಂಬಂಧಿಸಿದ ಸಹಾಯ / ಬೆಂಬಲ https://support.google.com/ ನಲ್ಲಿ ಲಭ್ಯವಿದೆ.
ವಿವಾದಗಳು: ನಿಮ್ಮ ದೇಶಕ್ಕೆ ಕಾನೂನುಬದ್ಧವಾಗಿ ಅಗತ್ಯವಿರುವಂತೆ https://ec.europa.eu/consumers/odr/main/?event=main.adr.show2 ಅಥವಾ ಬೇರೊಬ್ಬ ಪೂರೈಕೆದಾರರಲ್ಲಿ ಪಟ್ಟಿ ಮಾಡಲಾದ ಪರ್ಯಾಯ ವಿವಾದ ಪರಿಹಾರ ಪೂರೈಕೆದಾರರಿಗೆ ಸಂಬಂಧಿಸಿದಂತೆ ದೂರನ್ನು ತೆಗೆದುಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ. ಹೆಚ್ಚಿನ ವಿವರಗಳು Google ಸೇವಾ ನಿಯಮಗಳಲ್ಲಿ ಲಭ್ಯವಿವೆ.
ಭದ್ರತಾ ಘಟನೆಗಳು: ಸುರಕ್ಷತೆ ಅಥವಾ ಗೌಪ್ಯತೆಗೆ ಸಂಬಂಧಿಸಿದ ಘಟನೆಗಳನ್ನು ವಿಳಂಬವಿಲ್ಲದೆ ಗುರುತಿಸಲು ಮತ್ತು ಪ್ರತಿಕ್ರಿಯಿಸಲು Google ಕಟ್ಟುನಿಟ್ಟಾಗಿ 24/7 ಘಟನೆ ನಿರ್ವಹಣಾ ಪ್ರೋಗ್ರಾಂ ಅನ್ನು ನಿರ್ವಹಿಸುತ್ತದೆ. Google, ನಿಮ್ಮ ಆನ್‌ಲೈನ್ ಸುರಕ್ಷತೆಯನ್ನು ನಿರ್ವಹಿಸುವುದಕ್ಕೆ ನಿಮಗೆ ಸಹಾಯ ಮಾಡಲು Google ಭದ್ರತಾ ಪರಿಶೀಲನಾ ಪಟ್ಟಿಯನ್ನು ಸಹ ಒದಗಿಸುತ್ತದೆ.
ವೈಯಕ್ತಿಕ ಡೇಟಾ: Google Chat ಗೆ ಸೈನ್ ಅಪ್ ಮಾಡಲು, ನಿಮ್ಮ ಹೆಸರು, ಇಮೇಲ್ ಮತ್ತು ಫೋನ್ ಸಂಖ್ಯೆಯನ್ನು ನೀವು ಒದಗಿಸಬೇಕಾಗುತ್ತದೆ. ನೀವು Google Chat ಬಳಸುವಾಗ Google ಸಂಗ್ರಹಿಸಿದ ವೈಯಕ್ತಿಕ ಡೇಟಾದ ಕುರಿತಾದ ಹೆಚ್ಚಿನ ಮಾಹಿತಿಯನ್ನು Google ಗೌಪ್ಯತೆ ನೀತಿ (https://policies.google.com/privacy ನಲ್ಲಿ ಲಭ್ಯವಿದೆ) ಒದಗಿಸುತ್ತದೆ. Google ಗೌಪ್ಯತೆ ನೀತಿಯು ನಿಮ್ಮ ಮತ್ತು Google ನಡುವಿನ ಒಪ್ಪಂದದ ಭಾಗವಾಗುವುದಿಲ್ಲ ಅಥವಾ ಈ ಸಾರಾಂಶವನ್ನು ರೂಪಿಸುವುದಿಲ್ಲ.

---

[1]ಯುರೋಪಿಯನ್ ಸಂಸತ್ತಿನ ಡೈರೆಕ್ಟಿವ್ (EU) 2018/1972 ಮತ್ತು 11ನೇ ಡಿಸೆಂಬರ್ 2018 ರ ಕೌನ್ಸಿಲ್‌ನ ವಿಧಿ 102(3) ಇವು ಯುರೋಪಿಯನ್ ಎಲೆಕ್ಟ್ರಾನಿಕ್ ಕಮ್ಯುನಿಕೇಷನ್ಸ್ ಕೋಡ್ (OJ L 321, 17.12.2018, ಪುಟ. 36) ಅನ್ನು ರೂಪಿಸಿವೆ.